# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 714 |
| ಸದಸ್ಯರ ಹೆಸರು | : | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 25/09/2020 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಕಾರವಾರ ಜಿಲ್ಲೆಯಲ್ಲಿ ಅಂಗನವಾಡಿಗಳಿಗೆ ಪೂರೈಸುತ್ತಿರುವ ಆಹಾರದಲ್ಲಿ ಹುಳಬಿದ್ದ ರಾಗಿ ಹಿಟ್ಟು ಹಾಗೂ ಹೆಸರುಕಾಳುಗಳನ್ನು ಮಕ್ಕಳಿಗೆ ಪೂರೈಸುತ್ತಿದ್ದು, ಇದರಿಂದ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದು, ಈ ರೀತಿ ತೀರಾ ಕಳಪೆ ಮಟ್ಟದ ಆಹಾರ ಪೂರೈಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು.) | ಇಲ್ಲ. ಉತ್ತಮ ಗುಣಮಟ್ಟದ ಆಹಾರ ಪದಾರ್ಥಗಳನ್ನು ಪೂರೈಸಲಾಗುತ್ತಿದೆ. |
| ಆ. | ಈ ಸಂಬಂಧ ಅಧಿಕಾರಿಗಳು ಆಕ್ಷೇಪಣೆ ಮಾಡದೇ ಇರುವ ಕುರಿತು ಸರ್ಕಾರ ತನಿಖೆ ಮಾಡುವುದೇ; (ವಿವರ ನೀಡುವುದು.) | ಅನ್ವಯಿಸುವುದಿಲ್ಲ. |
| ಇ. | ಜಿಲ್ಲೆಯಲ್ಲಿರುವ ಅಂಗನವಾಡಿಗಳಿಗೆ ಆಹಾರವನ್ನು ಪೂರೈಸುತ್ತಿರುವ ಸಂಸ್ಥೆಗಳ ಅಥವಾ ಗುತ್ತಿಗೆದಾರರ ವಿವರಗಳನ್ನು ತಾಲ್ಲೂಕುವಾರು ನೀಡುವುದು; | ಕಾರವಾರ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಆಹಾರವನ್ನು ಪೂರೈಸುತ್ತಿರುವ ಸಂಸ್ಥೆಗಳ ವಿವರ ಈ ಕೆಳಕಂಡತಿವೆ: (ಕೆಳಗಿನ ಕೋಷ್ಟಕ) |

| ಕ್ರಸ | ತಾಲ್ಲೂಕಿನ ಹೆಸರು | ಸಂಸ್ಥೆ ಹೆಸರು |
|---|---|---|
| 1 | ಅಂಕೋಲಾ | ಎಂ.ಎಸ್.ಪಿ.ಟಿ.ಸಿ ಕುಮಟಾ |
| 2 | ಕುಮಟಾ | |
| 3 | ಭಟ್ಕಳ | ಎಂ.ಎಸ್.ಪಿ.ಟಿ.ಸಿ ಹೊನ್ನಾವರ |
| 4 | ಹೊನ್ನಾವರ | |
| 5 | ಕಾರವಾರ | ಎಂ.ಎಸ್.ಪಿ.ಟಿ.ಸಿ ಕಾರವಾರ |
| 6 | ಮುಂಡಗೋಡ | |
| 7 | ಯಲ್ಲಾಪುರ | |
| 8 | ಸಿದ್ದಾಪುರ | ಎಂ.ಎಸ್.ಪಿ.ಟಿ.ಸಿ ಶಿರಸಿ |
| 9 | ಶಿರಸಿ | |

| | | |
|---|---|---|
| ಈ. | ಆಹಾರವನ್ನು ಪೂರೈಸುತ್ತಿರುವ ಸಂಸ್ಥೆಗಳು ಅಥವಾ ಗುತ್ತಿಗೆದಾರರು ಆಹಾರ ಖರೀದಿಸುತ್ತಿರುವ ಆಹಾರ ಸಾಮಗ್ರಿಗಳ ಬೆಲೆಗೂ ಹಾಗೂ ಅಂದಿನ ಎ.ಪಿ.ಎಂ.ಸಿ. ಮಾರುಕಟ್ಟೆ ಬೆಲೆಗೂ ವ್ಯತ್ಯಾಸವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ. ಆಹಾರ ಪದಾರ್ಥಗಳ ಬೆಲೆಗಳನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯು ಆಹಾರ ಪದಾರ್ಥಗಳಿಗೆ ಬೆಲೆಗಳನ್ನು ನಿಗದಿಪಡಿಸುತ್ತಿದೆ. |
| ಉ. | ಹಾಗಿದ್ದಲ್ಲಿ, ಮಾರುಕಟ್ಟೆ ಜೆಲ್ಲೆಗಿಂತ ಕಡಿಮೆ ದರದಲ್ಲಿ ಕಳಪೆ ಆಹಾರ ಸಾಮಗ್ರಿಗಳನ್ನು ಖರೀದಿಸಿ ಪೂರೈಸುತ್ತಿರುವುದರ ಬಗ್ಗೆ ಸಂಬಂಧಿಸಿದ ತಾಲ್ಲೂಕು ಅಧಿಕಾರಿ ಯಾರ ಗಮನಕ್ಕೆ ತರದೇ ಇರುವುದರಿಂದ ಅವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ನೀಡುವುದು) | ಅನ್ವಯಿಸುವುದಿಲ್ಲ. |

(ಶಶಿಕಲಾ ಅಣ್ಣಾಸಾಹೇಬ್ ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ,
ಹಾಗೂ ಹಿರಿಯ ನಾಗರೀಕರ ಸಬಲೀಕರಣ ಸಚಿವರು.

ಸಂಖ್ಯೆ :ಮಮಇ 184 ಐಸಿಡಿ 2020.